3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.205/2018**

ಪ್ರಾಸಾ 6

ಚಾಸಾ 6

| | |
|---|---|
| ಹೆಸರು | ಪರಮಶಿವಯ್ಯ |
| ತಂದೆಯ ಹೆಸರು | ಶಿವಣ್ಣ |
| ವಯಸ್ಸು | 65 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಬಿಳಿಗೆರೆಪಾಳ್ಯ |

ಸಾಕ್ಷಿಯನ್ನು ದಿನಾಂಕ 11.06.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿಗಳು ಇರುತ್ತವೆ. ಅದು ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ.6(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸುಮಾರು ಐದಾರು ವರ್ಷಗಳ ಹಿಂದೆ ಬೆಳಿಗ್ಗೆ 10 – 11 ಗಂಟೆ ಸಮಯದಲ್ಲಿ ತೋಟದ ಹತ್ತಿರ ನಾನು ಹೋಗುತ್ತಿದ್ದಾಗ ಪೊಲೀಸರು ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ

ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದ:**

2) ದಿನಾಂಕ 27.02.2018 ರಂದು ಮಧ್ಯಾಹ್ನ 12.30 ರಿಂದ 1.00 ಗಂಟೆ ಸಮಯದಲ್ಲಿ ತಿಪಟೂರಿನ ಉಪಾಧೀಕ್ಷಕರು ಈ ಪ್ರಕರಣದ 3 ಮತ್ತು 5 ನೇ ಆರೋಪಿಗಳು 1 ನೇ ಆರೋಪಿಯ ಮನೆಯ ಅಡುಗೆ ಮನೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಬಚ್ಚಿಟ್ಟಿರುವುದಾಗಿ ತಿಳಿಸಿ ತೋರಿಸಿ ತೆಗೆದುಕೊಟ್ಟಿರುವುದನ್ನು ನಿಪಿ.6 ಪಂಚನಾಮ ಮೂಲಕ ಅಮಾನತ್ತುಪಡಿಸಿಕೊಂಡು ನಂತರ ಸ್ಥಳದಲ್ಲಿದ್ದ ನನ್ನ ಮತ್ತು ಚಾಸಾ.5 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆಂದು ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಜಾತಿಯವರು ಎಂದರೆ ಸರಿ. ಮೊದಲಿನಿಂದಲೂ 1 ರಿಂದ 3 ನೇ ಆರೋಪಿಗಳು ನನಗೆ ಗೊತ್ತು ಎಂದರೆ ಸರಿ. ನಾನು ಮತ್ತು 1 ರಿಂದ 3 ನೇ ಆರೋಪಿಗಳು ಪ್ರೀತಿ ವಿಶ್ವಾಸದಿಂದ ಇರುತ್ತೇವೆ ಎಂದರೆ ಸರಿ. ಆದ್ದರಿಂದ, ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಆರೋಪಿಗಳ ಪರ ಶ್ರೀ.ಎನ್.ಬಿ. ವಕೀಲರಿಂದ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.